ಒ ಎಸ್ ನಂ.31-2015
ಡಿ ಡಬ್ಲೂ ಃ 1

( ಸಾಕ್ಷಿಯನ್ನು ಪುನಃ ಕರೆಯಿಸಿ ದಿನಾಂಕಃ 09-10-2018 ರಂದು ಪ್ರಮಾಣ ವಚನ ಭೋಧಿಸಲಾಯಿತು .)

**7. ಮುಂದುವರೆದ ಪಾಟಿ ಸವಾಲು ಃ ಶ್ರೀ ಎಮ್ ಪಿ ಬಿ ವಕೀಲರಿಂದಃ** ನನ್ನ ವಾಸ್ತವ್ಯದ ಮನೆ ಎರಡು ಪಕ್ಕೆಯ ಮನೆ ಎಂದರೆ ನಿಜ . ನಮ್ಮ ಮನೆಯ ಮುಂದುಗಡೆ ಅಂಗಳಕ್ಕೆ ಸಿಮೆಂಟ್ ಹಾಕಿರುತ್ತೇವೆ. ಮನೇಯ ಅಂಗಳದ ನಂತರ ಉತ್ತರ ದಿಕ್ಕಿಗೆ ಗೋಡೆ ಕಟ್ಟಿದ್ದೇವೆ ಎಂದರೆ ನನಗೆ ಗೊತ್ತಾಗುವುದಿಲ್ಲ. ನನಗೆ ಎನು ಹೇಳಿದರು ನನಗೆ ಅಷ್ಟೊಂ ದು ಗೊತ್ತಾಗುವುದಿಲ್ಲ . ಎರಡನೆ ಪ್ರತಿವಾದಿಗೆ ನನಗಿಂತ ಹೆಚ್ಚಿಗೆ ಜ್ಞಾಪಕ ಶಕ್ತಿ ಇದೆಯಾ ಎಂದರೆ ಸಾಕ್ಷಿ ಸ್ವತಃ ಹೇಳುತ್ತಾರೆ ನನ್ನ ಹಾಗೆ ಇರುತ್ತದೆ. ಸರ್ವೆ ನಂಬರ 89/1 ಅ ಜಮೀನಿನ ಚಕ್ ಬಂದಿ ನನಗೆ ಗೊತ್ತಾಗುವುದಿಲ್ಲ . ಸರ್ವೆ ನಂಬರ 89/1 ಅ ಜಮೀನಿನ ಯಾವ ದಿಕ್ಕಿಗೆ 89/6 ಬರುತ್ತಿ ದೆ ಎಂದರೆ ಸಾಕ್ಷಿಃ ಸ್ವತಃ ಹೇಳುತತ್ತಾರೆ ನನಗೆ ದಿಕ್ಕು ಗೊ ತ್ತಾಗುವುದಿಲ್ಲ . ನಮ್ಮ ಮನೆ ಸರ್ವೆ ನಂಬರ 89/6 ರಲ್ಲೆಯೆ ಇರುತ್ತದೆ. ಸರ್ವೆ ನಂಬರ 89/1 ಅ ನಮ್ಮ ಮನೆಯ ಮುಂದುಗಡೆ ಬರುತ್ತದೆ. ಸರ್ವೆ ನಂಬರ 89/6 ಮತ್ತು ಸರ್ವೆ ನಂಬರ 89/1 ಅ ರಲ್ಲಿ ಆವರದ ಗೋಡೆ ನಮ್ಮ ಮನೆಯ ಮುಂದುಗಡೆ ಇರುತ್ತದೆ . ತಕರಾರಿ ಬಾವಿಯಿಂದ ಪಾಗಾರ 6 ಪೂಟು ಅಂತರ ಇರುತ್ತದೆ. ನಾಗಾರ ಕಟ್ಟೆಯಿಂದ ಸದರ ಪಾಗಾರ 10 ಪೂಟು ಅಂತರ ಇರುತ್ತದೆ. ನಮ್ಮ ಮನೆಯ ಅಂಗಳದಿಂದ ಹೊರಗೆ ಬರಬೇಕಾದರೆ ಒಂದೇ ದಣಪೆ ಇರುತ್ತದೆ. ಸದರಿ ದಣಪೆ ನಮ್ಮ ಮನೆಯ ಮುಂದುಗಡೆ ಇರುತ್ತದೆ. ನಮ್ಮ ಮನೆಯ ಮುಂದೆ ಇರುವ ದಣಪೆಯಿಂದ 10 ರಿಂದ 12 ಮನೆಯವರು ಉಪಯೋಗಿಿಸು ತ್ತಾರೆ . ನಮ್ಮ ಮನೆಯ ಮುಂದೆ ಇರುವ ಕಾಲು ದಾರಿ ಡಾಂಬರ ರಸ್ತೆಗೆ ಹೋಗಿ ತಲುಪುತ್ತದೆ. ನಾನು ನಮ್ಮ ಮನೆಗೆ ಕಾಲು ದಾರಿ ಮುಖಾಂತರ ಬಂದು ಹೋಗಿ ಮಾ ಡುತ್ತೇನೆ. ಸದರಿ ಕಾಲು ದಾರಿ ಎನ್ ಎ ಜೆ ರೋಡಿಗೆ ಕೂಡುತ್ತದೆ

ಎಂದರೆ ನಿಜ.ನಮ್ಮ ಮನೆಯ ಮುಂದೆ ನಿಂತರೆ ಎನ್ ಎ ಜಿ ರೋಡ್ ಕಾಣುತ್ತದೆ ಎಂದರೆ ನಿಜ. ಎನ್ ಎ ಜಿ ರೋಡನಿಂದ ಬರುವಾಗ ಮೊದಲು ರಾಘವೇಂದ್ರ ವೆಂಕಟ್ರಮಣ ನಾಯಕ ನಂತರ ಅನಂತ ಕಲ್ಲು ನಾಯ್ಕ ಇವರ ಜಮೀನು ಬರುತ್ತದೆ. ಅನಂತ ಕಲ್ಲು ನಾಯ್ಕ ಇವರ ಜಮೀನು ಆದ ನಂತರ ಪುನಃ ರಾಘವೇಂದ್ರ ನಾಯಕ ಇವರ ಜಮೀನು ಬರುಿತದೆ. ನಂತರ ನಮ್ಮ ಜಮೀನು ಬರುತ್ತದೆ.

8. ಎನ್ ಎ ಜಿ ರಸ್ತೆಯಿಂದ ಉಳಿದ ಮನೆಯವರು ಹೋಗಲು 3 ಪೂಟು ಅಗಲದ ಕಾಲು ದಾರಿ ಇರುಿತ್ತದೆ. ತಕರಾರಿ ಬಾವಿ ಮತ್ತು ದಾರಿಯ ಮಧ್ಯದಲ್ಲಿ ಪಾಗಾರ ಇದೆಯಾ ಎಂದರೆ ಸಾಕ್ಷಿ ಸ್ವತಃ ಹೇಳುತ್ತಾರೆ ನನ್ನದು ಬೇರೆ ಮತ್ತು ವಾದಿಯರ ದು ಬೇರೆ ಪಾಗಾರ ಇರುತ್ತದೆ . ಬಾವಿ ಮತ್ತು ದಾರಿಯ ಪಕ್ಕದಲ್ಲಿ ವಾದಿಯರ ಮನೆ ಬರುತ್ತದೆ. ದಾರಿಯಿಂದ 12 ಪೂಟು ಅಂತರದಲ್ಲಿ 3 ನೇ ವಾದಿಯ ಮನೆ ಬರುತ್ತದೆ. ಬಾವಿ ಆದ ನಂತರ ಯಾರ ಮನೆ ಬರುತ್ತದೆ ಎಂದರೆಸಾಕ್ಷಿ ಸ್ವತಃ ಹೇಳುತ್ತಾರೆ 3 ಪೂಟು ಅಗಲದ ರಸ್ತೆ ಬರುತ್ತದೆ. ಬಾವಿ ಮತ್ತು 3 ನೇ ವಾದಿಯ ಮನೆಯ ಮಧ್ಯದಲಿ ದಾರಿ ಮತು ಕೌಪೌಂಡು ಇರುತ್ತದೆ . ದಾರಿ ಮತ್ತು ಕೌಪೌಂಡು ಮಧ್ಯದಲ್ಲಿ ವಾದಿ ಮತ್ತು ನಮ್ಮ ಅರ್ಧ ಅರ್ಧ ಜಮೀನು ಇರುತ್ತದೆ.

9. ನಮ್ಮ ಮನೆಯ ಬಲ ದಿಕ್ಕಿಗೆ ಯಾವುದೇ ಮನೆ ಬರುವುದಿಲ್ಲ. ನಾನು ಮನೆಯಿಂದ ಬಾವಿ ನೀರು ಪಡೆಯಲು ವಾದಿಯರ ಮನೆ ಹತ್ತಿರ ಇರುವ 3 ಪೂಟು ಅಗಲದ ದಾರಿಗೇ ಬರುವುದಿಲ್ಲ . ದಣಪೆಯ ಎರಡು ದಿಕ್ಕಿಗೆ ಪಾಗಾರ ಇರುತ್ತದೆ . ನಮ್ಮ ಮನೆಗೆ 3 ಪೂಟು ಅಗಲದ ದಾರಿಯನ್ನು ಹೊರತು ಪಡಿಸಿ ಬೇರೆ ದಾರಿ ಇರುವುದಿಲ್ಲ . ನಾವು ಇದೇ ದಾರಿಯಿಂದಲೇ ಬಾವಿ ನೀರನ್ನು ಪಡೆಯುತ್ತೇವೆ . ತಕರಾರಿ ಬಾವಿಗೆ ನಾವೇ ಪಂಪ್ ಮತ್ತು ಎರಡು ಗಡಗಡೆ ಹಾಕಿರುತ್ತೇವೆ. ದಾರಿಯ ಮೇಲೆ ಬಂದು ಒಂದು ಗಡಗಡೆಯಿಂದ ನೀರನ್ನು ಪಡೆಯುತ್ತೇವೆ . ಇನ್ನೊಂದು ಗಡಗಡೆ ವಿರುದ್ಧ ದಿಕ್ಕಿನಲ್ಲಿಇರುತ್ತದೆ. ಒಂದು ಗಡೆಗಡೆಯಿಂದ ಇನ್ನೊಂದು ಗಡಗಡೆಗೆ 4 ಪೂಟು ಅಂತರ

ಇರಬಹುದು. ನಾವು ಒಂದೇ ಕಡೆ ನಿಂತು ಎರಡು ಗಡೆಗಡೆಯಿಂದ ನೀರು ತೆಗೆಯಲು ಆಗುವುದಿಲ್ಲ . ಸಾಕ್ಷಿ ಸ್ವತಃ ಹೇಳುತ್ತಾರೆ ದಾರಿಯ ಮುಖಾಂತರ ತೆಗೆಯುತ್ತವೆ . ಇನ್ನೊಂದು ಗಡಗಡೆಗೆ ಸಪೂರದವಾದ ದಾರಿ ಮುಖಾಂತರ ಹೋಗಿ ನೀರನ್ನು ಪಡೆಯುತೇವೆ . ಇನ್ನೊಂದು ಗಡಗಡೆಗೆ ನಮ್ಮ ಅಂಗಳದಿಂದ ಹೋಗಿ ನೀರು ತೆಗೆಯಲು ಅಗುವುದಿಲ್ಲ . ಅದಕ್ಕೆ ರಸೆಯಿಂದಲೇ ಬರಬೇಕಾಗುತ್ತದೆ. ಪಂಪ್ಷ ಶೆಡ್ ನಾಗರದ ಹಿಂದುಗಡೆ ಇರುತ್ತ ದೆ . ನಾಗರ ಸೂರ್ಯ ಮುಳುಗುವ ಕಡೆ ಮುಖ ಮಾಡಿರುತ್ತದೆ. ನಮ್ಮ ಶೆಡ್ ಯಾವ ಕಡೆ ಮುಖ ಮಾಡಿರುತ್ತದೆ ಎಂದು ನನಗೆ ಗೊತ್ತರುವುದಿಲ್ಲ . ಶೆಡ್ ನಮ್ಮ ಮನೆಯ ಕಡೆ ಮುಖ ಮಾಡಿ ಇರುವುದಿಲ್ಲ . ಶೆಡ್ ಎನ್ ಎ ಜಿ ರಸ್ತೆಯ ಕಡೆ ಮುಖ ಮಾಡಿರುತ್ತದೆ ಎಂದರೆ ಗೊತ್ತಿರುವುದಿಲ್ಲ . ಎನ್ ಎ ಜಿ ರಸ್ತೆಯಿಂದ ನಮ್ಮ ಮನೆಗೆ 3 ಪೂಟು ರಸ್ತೆ ಮಖಾಂತರ ಬರುತ್ತೇವೆ . ಬಾವಿಯ ಎಡಗಡೆ ಮತ್ತು ಬಲಗಡೆ ಎರಡು ರಸ್ತೆಗಳು ಇವೆ ಎಂದರೆ ಸರಿಯಲ್ಲ. ಬಾವಿಯಲ್ಲಿ ಎರಡೆರಡು ಪ್ರತ್ಯೇಕ ಗಡಗಡೆ ಇವೆ ಎಂದರೆ ಸರಿಯಲ್ಲ. ತಕರಾರಿ ಬಾವಿಗೆ ಒಂದೇ ಗಡಗಡೆ ಇರುತದೆ ಎಂದು ತೋರಿಸಲು ಫೋಟೊ ಹಾಜರು ಪಡಿಸಲು ತೊಂದರೆ ಇರುವುದಿಲ್ಲ . ತಕರಾರಿ ಬಾವಿಗೆ ವಾದಿಯರದು ಎರಡು ಗಡಗಡೆ ಹಾಕಿದ್ದಾರೆ ಎಂದರೆ ಸರಿಯಲ್ಲ . ಬಾವಿ ನೀರನ್ನು ತೆಗೆಯುವಾಗ ಕಾಲು ಇಡಲು ಎರಡು ಪ್ರತ್ಯೇಕವಾದ ವ್ಯವಸ್ಥೆಮಾಡಲಾಗಿದೆ ಎಂದರೆ ಸರಿಯಲ್ಲ . ತಕರಾರಿ ಬಾವಿಗೆ ವಾದಿಯರು ಪಂಪ್ ಶೆಟ್ ಹಾಕಿರುವುದಿಲ್ಲ .

10. ತಕರಾರಿ ಬಾವಿ ಅನಾದಿ ಕಾಲದಿಂದ ಇದು ವಾದಿಯರಿಗೂ ನೀರನ್ನು ಪಡೆಯುವ ಹಕ್ಕು ಇರುತದೆ ಎಂದರೆ ಸರಿಯಲ್ಲ . ನಾಗರ ಕಟ್ಟೆ ಮತ್ತು ಬಾವಿ ತಾಗಿಯೆ ಇದೆ ಎಂದರೆ ನಿಜ . ನಾಗರ ಕಟ್ಟೆಗೆ ನಾವೊಬ್ಬರೆ ಪೂಜೆ ಮಾಡುತ್ತೇವೆ . ನಾಗರ ಕಟ್ಟೆ 1987 ರಲ್ಲಿಯೇ ಕಟ್ಟಲಾಗಿದೆ. ವಾದಿಯರ ಪೂಜೆ ಮಾಡಲು ತಕರಾರು ಮಾಡಿದಿರಾ ಎಂದರೆ ಸಾಕ್ಷಿ ಸ್ವತಃ ಹೇಳುತ್ತಾರೆ ವಾದಿಯರು ಪೂಜೆ ಮಾಡಲು ಬಂದಿದ್ದೆ ಇರುವುದಿಲ್ಲ . ವಾದಿಯರು ಪೂಜೆ ಮಾಡಲು ನನ್ನ ತಕರಾರು ಇರುತದೆ .

ವಾದಿಯರು ಅನಾದಿ ಕಾಲದಿದಂದ  ಬಾವಿ ನೀರನ್ನು ಮತ್ತು ನಾಗರ ಕಟ್ಟೆ ದೇವರ ಪೂಜೆ ಮಾಡುತ್ತ ಬಂದಿದ್ದಾರೆ ಎಂದರೆ ಸರಿಯಲ್ಲ .  ಬಾವಿ ಕಟ್ಟಿದ ಬಗ್ಗೆ ನನ್ನ ಹತ್ತಿರ  ದಾಖಲೆ ಇರುವುದಿಲ್ಲ.

11.  1 ನೇ ವಾದಿ ಮತ್ತು 3 ನೇ ವಾದಿಯ  ಮನೆಯ ಹತ್ತಿರ ಬಾವಿ   ಇರುತ್ತದೆ . ಸದರ ಬಾವಿ ಮನೆಯಿಂದ 20 ಪೂಟು ಅಂತರ ಇರುತ್ತದೆ. ಬೊರ್ ವೆಲ್  ತಕರಾರಿ ಬಾವಿಯಿಂದ  10 ಪೂಟು ಅಂತರ ಇರುತ್ತದೆ.  ಮೇಲೆ ಹೇಳಿದ ಬೊರ್ ವೆಲ್ ಒಂದೆ  ಇರುತ್ತದೆ .  ತಕರಾರಿ ಬಾವಿ ಮತ್ತು ವಾದಿಯರ ಬಾವಿಗೂ  10 ಪೂಟು ಅಂತರ ಇರುತ್ತದೆ.  ವಾದಿಯರಿಗೆ ಪ್ರತ್ಯೇಕ  ಬಾವಿ ಇರುವುದಿಲ್ಲ ಎಂದರೆ ಸರಿಯಲ್ಲ.   ಎಲ್ಲಾ ವಾದಿಯರು ತಕರಾರಿ ಬಾವಿಯಲ್ಲಿ ಪಂಪ್ ಶೆಟ್ ಹಾಕಿ ನೀರನ್ನು ಪಡೆಯುತ್ತಿದ್ದಾರೆ ಎಂದಂರೆ ಸರಿಯಲ್ಲ .   ವಾದಿಯ ಮನೆಯ ಮನೆಯ ಮುಂದೆ ಇರುವ ನಲ್ಲಿ ನೀರನ್ನು ಬೇರೆ ಯಾರು ಉಪಯೋಗಿಸುವುದಿಲ್ಲ.  ಸದರ ನಳವು ದಾರಿಯಿಂದ 10  ಪೂಟು ಅಂತರ ಇರುತ್ತದೆ. ನಾವು   ಸದರಿ ನಳದ ನೀರನ್ನು ಎಂದು ಉಪಯೋಗಿಸಿರುವುದಿಲ್ಲ .  ನನ್ನ ಪ್ರಕಾರ 2012 ರಲ್ಲಿ   ನಾವೇ    ಗಡಗಡ ಹಾಕಿರುತ್ತೇವೆ ಸಾಕ್ಷಿ ಸ್ವತಃ ಹೇಳುತ್ತಾರೆ ವಾದಿಯರು ಹಾಕಿರುವುದಿಲ್ಲ . ನನ್ನ ಹತ್ತಿರ  ಗಡಗಡ ಇರುವ ಬಗ್ಗೆ ಪೋಟೊ  ಇರುವುದಿಲ್ಲ . ಈಗ ತಕರಾರಿ ಬಾವಿಗೆ ಎಷ್ಟು    ಪಂಪ್ ಮತ್ತು  ಗಡಗಡೇ ಇರುತ್ತದೆ ಎಂದು ತೋರಿಸಲು ಪೋಟೊ   ಇರುವುದಿಲ್ಲ .   ವಾದಿಯರ ವಿರುದ್ದ ಪೊಲೀ ಸ್ ಠಾಣೆಯಲ್ಲಿ ದೂರನ್ನು ಸಲ್ಲಿಸಿರುತ್ತೇವೆ.

12.  ವಾದಿಯರು ಸರ್ವೆ  ಮಾಡಿದ್ದು   ಸರಿ  ಇರುವುದಿಲ್ಲ ಎಂದು ಮೇಲಾಧಿಕಾರಿಗಳಿಗೆ ಅರ್ಜಿ ಸಲ್ಲಿಸಿರುತ್ತೆವೆ.   ಆ ರೀತಿ ಅರ್ಜಿ ಸಲ್ಲಿಸಿದ ಮೇಲೆ  ಮೇಲಾಧಿಕಾರಿಗಳು ಸರ್ವೆ ಮಾಡಿರುವುದಿಲ್ಲ , ತಕರಾರಿ ಬಾವಿ ನನ್ನ ಜಮೀನಿನಲ್ಲಿ ಬರುತ್ತದೆ ಎಂದು ತೋರಿಸಲು ನಕಾಸೆ ಇರುವುದಿಲ್ಲ ಸಾಕ್ಷಿ ಸ್ವತಃ ಹೇಳುತ್ತಾರೆ 89/6 ರಲ್ಲಿಯೆ  ಬರುತ್ತದೆ. ತಕರಾರಿ ಬಾವಿ ನಮ್ಮ ಜಮೀನಿನಲ್ಲಿ ಎಂದು ತೋರಿಸಲು

ನಕಾಸೆ ತರುತ್ತದೆ. ಅದನ್ನು ಹಾಜರು ಮಾಡಲು ತೊಂದರೆ ಇದೆಯಾ ಎಂದರೆ ಸಾಕ್ಷಿ ಸ್ವತಃ ಹೇಳುತ್ತಾರೆ ತೊಂದರೆ ಇರುವುದಿಲ್ಲ . ತಕರಾರಿ ಬಾವಿಯನ್ನು ವಾದಿಯರು ಹಕ್ಕಿನಿಂದ ಉಪಯೋಗಿಸಿಕೊಂಡು ಬಂದಿದ್ದಾರೆ ಎಂದರೆ ಸರಿಯಲ್ಲ. ಬಾವಿಗೆ ರಿಂಗ್ ಇರುತ್ತದೆ ಎಂದರೆ ಸಾಕ್ಷಿ ಸ್ವತಃ ಹೇಳುತ್ತಾರೆ ನಾವೇ ಹಾಕಿರುತ್ತೇವೆ . 7 ರಿಂಗ್ ಇರುತ್ತದೆ. ಬಾಳೆಗುಳಿಯಿಂದ ತಂದು ಹಾಕಿರುತ್ತೇವೆ. ಸದರಿ ರಿಂಗ್ ಹಣ ಕೊಟ್ಟು ತಂದಿರುತ್ತೇವೆ . ರಿಂಗ್ ಹಾಕಿದ ಬಗ್ಗೆ ದಾಖಲೆ ಇರುತ್ತದೆ. ಸಾಕ್ಷಿ ಸ್ವತಃ ಹೇಳುತ್ತಾರೆ ಅವಶ್ಯ ಇದ್ದರೆ ಹಾಜರು ಪಡಿಸುತ್ತೇನೆ . ವಾದಿಯರು ರಿಂಗನ್ನು ತಯಾರಿಸಿ ಹಾಜರು ಪಡಿಸಿದಿದಿರಾ ಎಂದರೆ ಸರಿಯಲ್ಲ . ವಾದಿಯರ ಮೇಲೆ ಹೊಟ್ಟೆ ಕಿಚ್ಚಿನಿಂದ ಅವರಿಗೆ ತಕರಾರಿ ಬಾವಿಯಲ್ಲಿ ಹಕ್ಕು ಇಲ್ಲಾ ಎಂದು ಸುಳ್ಳು ಹೇಳುತ್ತಿದೇನೆ ಎಂದರೆ ಸರಿಯಲ್ಲ . ಬಾವಿ ಕಟ್ಟೆಗೆ ಹೊಂದಿಕೊಂಡು ನಮ್ಮ ಮನೆಗೆ ಒಂದು , ಸಾರ್ವಜನಿಕರಿಗೆ ಒಂದು ರಸ್ತೆ ಇರುತ್ತದೆ ಎಂದರೆ ಸರಿಯಲ್ಲ. ಬಾವಿ ಕಟ್ಟೆಗೆ ಹೊಂದಿಕೊಂಡು 5,6 ತೆಂಗಿನ ಗಿಡ , ಮತ್ತು 6 ಅಡಿಕೆ ಗಿಡ ಮತ್ತು 4 ಬಾಳೆಗಿಡ ಇರುತ್ತದೆ. ಬಾವಿ ಹೊಂದಿಕೊಂಡು ಒಂದೇ ತೆಂಗಿನ ಮರ ಮತ್ತು ಶೆಡ್ ಇದೆ ಎಂದರೆ ಸರಿಯಲ್ಲ. ಸಾಕ್ಷಿ ದಾರರು ಯಾರು ಇರುವುದಿಲ್ಲ. ನಾನು ಬಟ್ರನ್ನು ನಾಗರ ಕಟ್ಟೆ ಸ್ಥಾಪಿಸಿದ ನಂತರ ಕರೆಸಿರುವುದಿಲ್ಲ. ವಾದಿಯರು ಬಟ್ರನ್ನು ಕರೆಯಿಸಿ ಪೂಜೆ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ . ನಾನು ವಾದಿಯರಿಗೆ ಹಕ್ಕು ಇಲ್ಲಾ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ)

ಒ ಹೇ ಕೇ ಸರಿ ಇದೆ

ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ
ಅಂಕೋಲಾ